**ಅ.ದಾವಾ. 201/2019** **ಪಿ.ಡಬ್ಲ್ಯೂ- 1**

**ದಿನಾಂಕಃ 17/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಆರ್.ಡಿ.ಆರ್. ವಕೀಲರಿಂದ.**

ಪ್ರಸ್ತುತ ದಾವೆಯನ್ನು ರತ್ನಮ್ಮರವರ ವಿರುದ್ಧ ಹಾಕಿರುತ್ತೇನೆ. ದಾವೆಯನ್ನು ಸರ್ವೆ ನಂಬರ್ 85 ರ 2 ಎಕರೆ 37 ಗುಂಟೆಗೆ ಹಾಕಿರುತ್ತೇನೆ. ರತ್ನಮ್ಮ ನನಗೆ ಸುಮಾರು 40 ವರ್ಷಗಳಿಂದ ಪರಿಚಯ. 2ನೇ ಪ್ರತಿವಾದಿ ನನಗೆ ಗೊತ್ತಿಲ್ಲ. ರತ್ನಮ್ಮರವರನ್ನು ನೀವು ಎಲ್ಲಿ ನೋಡಿದ್ದಿರಾ ಎಂದರೆ ಸಾಕ್ಷಿಯು ಅವರು ದನ-ಕರುಗಳನ್ನು ಮೇಯಿಸುವಾಗ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಊರು ನೇರಳೆ ಗ್ರಾಮ. ರತ್ನಮ್ಮರವರು ಮಲುಗನಹಳ್ಳಿ ಗ್ರಾಮದವರು. ನೇರಳೆ ಗ್ರಾಮದಿಂದ ಮಲುಗನಹಳ್ಳಿ ಗ್ರಾಮಕ್ಕೆ ಸುಮಾರು 100 ಮೀಟರ್ ಅಂತರ ಇರುತ್ತದೆ. ನೇರಳೆ ಬೋರೆ ಕಾವಲು ಹಾಗೂ ಮಲುಗನಹಳ್ಳಿ ಗಡಿ ಅಕ್ಕ-ಪಕ್ಕ ಇರುತ್ತದೆ ಎಂದರೆ ಸರಿ. ನೇರಳೆ ಬೋರೆ ಕಾವಲಿನಲ್ಲಿ 1ನೇ ಪ್ರತಿವಾದಿಗೆ ಜಮೀನು ಇದೆ ಎಂದರೆ ಗೊತ್ತಿಲ್ಲ. ನಮ್ಮ ಊರಿನಿಂದ ನೇರಳೆ ಬೋರೆ ಕಾವಲಿಗೆ ಸುಮಾರು 3 ಕಿ.ಮೀ. ಅಂತರ ಇರುತ್ತದೆ. 1ನೇ ಪ್ರತಿವಾದಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರು ಎಲ್ಲಿ ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ ಎಲ್ಲಿ ವಾಸವಿದ್ದಾರೆ ಹಾಗೂ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ.

ನನ್ನ ತಾತಾನ ಹೆಸರು ತಿಮ್ಮ ಭೋವಿ. ನೇರಳೆ ಬೋರೆ ಕಾವಲಿನಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 79 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 79 ದುರಸ್ತು ಆಗಿ ಎಷ್ಟು ಪೋಡುಗಳು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಯಾವ್ಯಾವಾ ಪೋಡಿನಲ್ಲಿ ಎಷ್ಟೇಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ನನ್ನ ಪ್ರಮಾಣಪತ್ರದಲ್ಲಿ 3 ಎಕರೆ 35 ಗುಂಟೆ ಜಮೀನು ಎಂದು ನಾನು ಬರೆಯಿಸಿಲ್ಲ. ನನಗೆ 47 ವರ್ಷ ವಯಸ್ಸು. 50 ವರ್ಷಗಳಿಂದ ಜಮೀನನ್ನು ಉಳುಮೆ ಮಾಡುತ್ತಿದ್ದೇನೆ ಎಂದು ಹೇಳಿರುವುದಕ್ಕೆ ನನ್ನ ಬಳಿ ದಾಖಲೆಗಳು ಇರುತ್ತದೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನನ್ನ ತಂದೆಯ ಹೆಸರು ತಿಮ್ಮನಾಯ್ಕ. ನನ್ನ ತಂದೆಗೆ ಜಮೀನು ಮಂಜೂರು ಆಗಿ ಸುಮಾರು 40 ವರ್ಷಗಳು ಆಯಿತು, ಜಮೀನು ಮಂಜೂರಾದ ದಿನಾಂಕ ನನಗೆ ಗೊತ್ತಿಲ್ಲ. ಜಮೀನು ಮಂಜೂರಾದ ಸಮಯದಲ್ಲಿ ನೀಡಿದ ಸಾಗುವಳಿ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಸಾಗುವಳಿ ಚೀಟಿಯನ್ನು ಯಾವ ವರ್ಷದಲ್ಲಿ ಕೊಟ್ಟಿರುತ್ತಾರೆ ಎಂದು ನೆನಪಿಲ್ಲ. ನನ್ನ ತಂದೆ ಹೆಸರಿಗೆ ಸುಮಾರು 20 ವರ್ಷಗಳ ಹಿಂದೆ ಖಾತೆ ಆಗಿರುತ್ತದೆ. ನನ್ನ ಪ್ರಕಾರ 40 ವರ್ಷದ ಹಿಂದೆ ಜಮೀನು ಮಂಜೂರು ಆಗಿದ್ದು, 20 ವರ್ಷದ ಹಿಂದೆ ಖಾತೆ ಆಗಿರುತ್ತದೆ ಎಂದರೆ ಸರಿ. 40 ವರ್ಷದ ಹಿಂದೆಯೇ ಜಮೀನು ನಿಮ್ಮ ತಂದೆಗೆ ಮಂಜೂರಾಗಿರುವುದಾಗಿ ಹೇಳುತ್ತಿದ್ದು, 20 ವರ್ಷದ ಹಿಂದೆ ಅವರ ಹೆಸರಿಗೆ ಖಾತೆಯಾಗಿರುವುದಾಗಿ ಹೇಳುತ್ತಿದ್ದು, 20 ವರ್ಷಗಳವರೆಗೆ ಯಾಕೆ ಖಾತೆ ಮಾಡಿಸಿರಲಿಲ್ಲ ಎಂದರೆ ಸಾಕ್ಷಿಯು

ನನ್ನ ತಂದೆ ಮಾಡಿಸಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮರಣ ಹೊಂದಿ 10 ವರ್ಷಗಳು ಆಯಿತು.

ನನ್ನ ತಾಯಿ ಹೆಸರು ಈರಮ್ಮ. ಅವರು ಮೃತಪಟ್ಟು ಸುಮಾರು 25 ವರ್ಷಗಳು ಆಯಿತು. ನನ್ನ ತಂದೆ-ತಾಯಿಗೆ ನಾನು ಒಬ್ಬನೇ ಮಗ, ಬೇರೆ ಯಾವುದೇ ಹೆಣ್ಣು ಮಕ್ಕಳು ಅಥವಾ ಗಂಡು ಮಕ್ಕಳು ಇಲ್ಲ. ನಿಪಿ-1 ಕ್ಕೆ ನೋಟರಿ ವಕೀಲರು ಸಹಿ ಮಾಡಿಲ್ಲ ಕೇವಲ ಮೊಹರು ಮಾತ್ರ ಇರುತ್ತದೆ ಎಂದರೆ ಸರಿ. ನಿಪಿ-1 ಅನ್ನು ಸುಮಾರು ವರ್ಷಗಳ ಹಿಂದೆ ಮಾಡಿಸಿರುತ್ತೇನೆ. ಅಂದಾಜು ಎಷ್ಟು ವರ್ಷಗಳು ಆಯಿತು ಎಂದು ನನಗೆ ನೆನಪಿಲ್ಲ. ವಂಶವೃಕ್ಷವನ್ನು ತಾಲ್ಲೂಕು ಕಛೇರಿಯಲ್ಲಿ ಪಡೆದುಕೊಳ್ಳಬೇಕು ಎಂಬ ವಿಚಾರ ನನಗೆ ಗೊತ್ತು. ನನ್ನ ಆಧಾರ್ ಕಾರ್ಡ್ ಹಾಗೂ ಪಡಿತರ ಚೀಟಿ ಇರುತ್ತದೆ. ನಾನು ನೇರಳೆ ಗ್ರಾಮದಲ್ಲಿ ಹುಟ್ಟಿರುತ್ತೇನೆ. ನನ್ನ ಹೆತ್ತ ತಾಯಿ ಹೆಸರು ಈರಮ್ಮ. ತಿಮ್ಮಬೋವಿ ಹಾಗೂ ಈರಮ್ಮ ನನ್ನ ಸಾಕು ತಂದೆ-ತಾಯಿ ಎಂದರೆ ಸರಿ. ನನ್ನ ತಂದೆ-ತಾಯಿಗೆ 4 ಜನ ಮಕ್ಕಳು. ತಿಮ್ಮಬೋವಿ ನನ್ನ ದೊಡ್ಡಪ್ಪನಾಗಬೇಕು.

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ನಿಪಿ-1 ರಲ್ಲಾಗಲೀ, ದಾವಾ ಪತ್ರದಲ್ಲಾಗಲೀ, ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಾಗಲೀ ತಿಮ್ಮಬೋವಿ ನನ್ನ ದೊಡ್ಡಪ್ಪ ಎಂದು ಬರೆಸಿಲ್ಲ ಎಂದರೆ ಸರಿ. ತಾಲ್ಲೂಕು ಕಛೇರಿಗೆ ಖಾತೆ ಬದಲಾವಣೆಗಾಗಿ ಸಲ್ಲಿಸಿದ ಅರ್ಜಿಯಲ್ಲಿ ತಿಮ್ಮಬೋವಿ ನನ್ನ ದೊಡ್ಡಪ್ಪ ಎಂದು ಹೇಳಿರುವುದಿಲ್ಲ. ತಿಮ್ಮಬೋವಿ ನನ್ನ ದೊಡ್ಡಪ್ಪ ಎಂದುಹೇಳಿ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ.

**( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು).**

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.